ನನ್ನ ಓದು

# ಮಾನವೀಯತೆಯ ನೆಲೆಗಟ್ಟಿನಲ್ಲಿ ಇತಿಹಾಸದ ಉತ್ಖನನ–ಶೋಧ



**ಪ್ರೊ. ಪ್ರಮೋದ ಮುತಾಲಿಕ**

ಐದು ದಶಕಗಳಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಮಲ್ಲಿಕಾರ್ಜುನ ಹಿರೇಮಠ ಅವರದು ವಿಶಿಷ್ಟ ಸೃಜನಶೀಲ ಸೃಷ್ಟಿ. ‘ಹವನ’ದಂಥ ಕಾದಂಬರಿ ಬರೆದಾದ ಮೇಲೆ, ಸುಮಾರು ಸಮಯದ ನಂತರ ‘ಹಾವಳಿ’ ಪ್ರಕಟ ಆಗಿದೆ. ವ್ಯಾಪ್ತಿ, ಆಶಯದಲ್ಲಿ ‘ಹಾವಳಿ’ ಕಾದಂಬರಿ ತುಂಬ ಭಿನ್ನವಾದುದು. ಭಾರತದ ಸ್ವಾತಂತ್ರ್ಯ ಚಳವಳಿ ಕಾಲಘಟ್ಟದ ಕಥೆ ‘ಹಾವಳಿ’ಯಲ್ಲಿ ಪ್ರಮುಖವಾಗಿದ್ದರೂ, ಕಾದಂಬರಿಯ ಅಂತಃಸತ್ವ ಕಾಲಾತೀತ ಆದದ್ದು. ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಹಂತದಲ್ಲಿ ಪ್ರಾರಂಭವಾಗುವ ಕಥಾನಕ, ಹೈದರಾಬಾದ್ ವಿಮೋಚನೆಯೊಂದಿಗೆ ಕೊನೆಗೊಳ್ಳುವುದು. ಕಾದಂಬರಿಯ ಆರಂಭ ಕೊಪ್ಪಳ ಜಿಲ್ಲೆಯ ಬಸಾಪುರ ಎಂಬ ಚಿಕ್ಕ ಗ್ರಾಮದಲ್ಲಿ, ಕೊನೆಯಾಗುವುದೂ ಅಲ್ಲಿಯೇ. ಈ ಪ್ರಾರಂಭ ಮತ್ತು ಕೊನೆಯ ನಡುವೆ, ಒಂದು ನಿರ್ದಿಷ್ಟ ಕಾಲಘಟ್ಟದ, ಮನಮುಟ್ಟುವ, ಮನಕಲಕುವ ಕಥಾನಕವೊಂದು ನಮ್ಮ ಮುಂದೆ ತೆರೆದುಕೊಳ್ಳುವುದು. ಹಿರೇಮಠರ ಅಭ್ಯಾಸಪೂರ್ಣ ಪುನರ್ ಸೃಷ್ಟಿ ಮತ್ತು ಕಲಾತ್ಮಕ ನಿರೂಪಣೆ ಕಾದಂಬರಿಯನ್ನು ಬಹುಕಾಲ ಉಳಿಯುವ ಅಪರೂಪದ ಕಲಾಕೃತಿಯನ್ನಾಗಿಸಿದೆ.

ಕಾದಂಬರಿ ಪ್ರಾರಂಭವಾಗುವದು ಬಸಾಪುರ ಗ್ರಾಮದ ಉರುಸ್ ಸಂದರ್ಭದಲ್ಲಿ ಕೆಲವು ಉತ್ಸಾಹಿ ಯುವಕರು ವಿರೂಪಾಕ್ಷ ಮಾಸ್ತರರ ಮಾರ್ಗದರ್ಶನದಲ್ಲಿ ಪ್ರಯೋಗಿಸುವ ಮಹಾಭಾರತದ ಒಂದು ಪ್ರಸಂಗದಿಂದ. ದ್ರೌಪದಿಯ ಮಾನಭಂಗಕ್ಕೆ ಯತ್ನಿಸುವ ದುಶ್ಯಾಸನ ಇಲ್ಲಿಯ ಕೇಂದ್ರ ವ್ಯಕ್ತಿ. ಎಲ್ಲರೂ ಖುಷಿಯಾಗಿ ಆನಂದಿಸುತ್ತಿದ್ದ ನಾಟಕ ಅನಿರೀಕ್ಷಿತವಾಗಿ ಕೊನೆಯಾಗಿ, ಊರಿನಲ್ಲಿ ಉದ್ವಿಗ್ನತೆ ಉಂಟಾಗುವುದು. ಇದು ತುಂಬ ಸಾಂಕೇತಿಕ. ಈ ಉದ್ವಿಗ್ನತೆಯೇ ಕಾದಂಬರಿಯ ಉದ್ದಕ್ಕೂ ಪ್ರವಹಿಸುವ ಮೂಲ ಭಾವ. ಈ ಭಾವದ ಮೂಲ ಇರುವುದು ವೈಯಕ್ತಿಕ, ಸಾಮಾಜಿಕ, ರಾಜಕೀಯ ಹಂತಗಳಲ್ಲಿ ಘಟಿಸುವ ಹಾವಳಿಗಳಿಂದ. ಒಂದರ್ಥದಲ್ಲಿ ಹಾವಳಿಗಳ ಮಹಾಪೂರವೇ ಹಿರೇಮಠರ ಈ ಕಥಾನಕದ ಉದ್ದಕ್ಕೂ ಕಂಡುಬರುವದು. ಕಾದಂಬರಿಯ ಪ್ರಮುಖ ಪಾತ್ರಗಳೆಲ್ಲ ಈ ಹಾವಳಿಗಳಿಗೆ ಪ್ರಜ್ಞಾಪೂರ್ವಕವಾಗಿ, ಅಪ್ರಜ್ಞಾಪೂರ್ವಕವಾಗಿ ಒಳಪಡುವವು. ಈ ಹಾವಳಿಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡು, ಎದುರಿಸಿ ತಮ್ಮ ಬದುಕಿಗೆ ಅರ್ಥವಂತಿಕೆಯನ್ನು ಪಡೆಯುವರು.

ಇಡೀ ಕಾದಂಬರಿ ಘಟಿಸುವುದು ಒಂದು ದಟ್ಟವಾದ ಐತಿಹಾಸಿಕ ಕಾಲಘಟ್ಟದ ಹಿನ್ನೆಲೆಯಲ್ಲಿ. ಇದು ಕಾದಂಬರಿಕಾರರ ಮೇಲೆ ದೊಡ್ಡ ಜವಾಬ್ದಾರಿಯನ್ನು ಹೇರಿದೆ. ಇಂಥ ಕಥೆಗಳು, ರಮ್ಯ ರಂಜಕ ಕಥೆಗಳಾಗಿ ಇತಿಹಾಸವನ್ನು ವೈಭವೀಕರಿಸಿದ ಉದಾಹರಣೆಗಳು ಸಾಕಷ್ಟು ಇವೆ. ಯಾವ ಹಂತದಲ್ಲೂ ‘ಹಾವಳಿ’ ಆ ಅಪಾಯಕ್ಕೆ ಒಳಗಾಗಿಲ್ಲ ಎಂಬುದು ಹಿರೇಮಠರಿಗೆ ಕಾದಂಬರಿ ಮಾಧ್ಯಮದ ಮೇಲೆ ಇರುವ ಹಿಡಿತಕ್ಕೆ ಸಾಕ್ಷಿ.